ಹೆಚ್ಚಿತು. ಈ ಶುಭ ಸಮಯದಲ್ಲಿ ಅವರು ಮಠದಲ್ಲಿ ಮೊಟ್ಟ ಮೊದಲಬಾರಿಗೆ 'ರಾಮನಾಮ ಸಂಕೀರ್ತನೆ' ಯನ್ನು ಆಯೋಜನೆ ಮಾಡಿದ್ದು, ಭಕ್ತವೃಂದವನ್ನು ಮೂಕವಿಸ್ಮಿತರನ್ನಾಗಿ ಮಾಡಿತು. ಸರಳ ಸಂಸ್ಕೃತದಲ್ಲಿ ಮತ್ತು ಸರಾಗ ಛಂದಸ್ಸಿನಲ್ಲಿ ಶ್ರೀರಾಮಚಂದ್ರ ಪ್ರಭುವಿನ ಲೀಲಾನಾಟಕವನ್ನು ಇಲ್ಲಿ ಸಂಕ್ಷಿಪ್ತವಾಗಿ ಪ್ರಸ್ತುತಪಡಿಸಲಾಗಿದೆ. ವಾದ್ಯವೃಂದದೊಡನೆ ಇದನ್ನು ಬಹು ಸುಲಭವಾಗಿ ಸಾಮೂಹಿಕವಾಗಿ ಹಾಡಬಹುದು.... ಮಾರ್ಚ್ ೨೦ರಂದು ನಡೆದ ಸಾರ್ವಜನಿಕ ಸಮಾರಂಭದಲ್ಲಿ ಕೂಡ ಇದನ್ನು ಹಾಡಲಾಯಿತು. ಆಗ ನೆರೆದ ಜನಸಂದಣಿಯು ಅನುಭವಿಸಿದ ಆನಂದದ ವೈಭವವನ್ನು ಕಾಣುವ ಸುಯೋಗ ನಮಗೆ ಹಿಂದೆಂದೂ ಒದಗಿಬಂದಿರಲಿಲ್ಲ. ಅವತ್ತು ನೆರೆದಿದ್ದ ಜನರ ಸಂಖ್ಯೆ ಸುಮಾರು ೫೦,೦೦೦! ಇಡೀ ದಿನ ವಿವಿಧ ಭಜನಾ ತಂಡಗಳು ಭಾವಪೂರ್ಣವಾಗಿ ಹಾಡುತ್ತ, ನರ್ತಿಸುತ್ತಿದ್ದವು. ಅಂದು ಕೂಡ ಅಂದೂಲಿನ ಪ್ರಸಿದ್ಧ ಕಾಲೀ–ಕೀರ್ತನ ತಂಡದವರು ಮತ್ತು ಮಠದ ಸಾಧುಬ್ರಹ್ಮಚಾರಿಗಳು ಪ್ರಸ್ತುತಪಡಿಸಿದ 'ರಾಮನಾಮ ಸಂಕೀರ್ತನ' ವಿಶೇಷ ಮೆಚ್ಚುಗೆಗೆ ಪಾತ್ರವಾಯಿತು."

ಇದಾಗಿ ಕೆಲವು ಕಾಲದಲ್ಲಿಯೇ, ಪೂಜ್ಯ ಸ್ವಾಮೀ ಬ್ರಹ್ಮಾನಂದಜಿ ಮಹಾರಾಜರು ಬೇಲೂರು ಮಠದ ವತಿಯಿಂದ, ಈ ಸಂಕೀರ್ತನೆಯನ್ನು ಒಳಗೊಂಡ ಸಣ್ಣ ಪುಸ್ತಕವೊಂದನ್ನು ಹೊರತಂದರು. ಅದು ಅತ್ಯಂತ ಜನಪ್ರಿಯವಾಯಿತು. ೧೯೧೧ ನೇ ಇಸವಿಯಲ್ಲಿ ಪ್ರಕಟವಾದ ಇದರ ಪರಿಷ್ಕೃತ ಆವೃತ್ತಿಯ ಮುನ್ನುಡಿಯಲ್ಲಿ ಪೂಜ್ಯ ಸ್ವಾಮೀಜಿಯವರು ಹೀಗೆ ಬರೆದಿದ್ದಾರೆ: "ಎರಡು ವರ್ಷಗಳ ಹಿಂದೆ ದಕ್ಷಿಣಭಾರತದ ಪ್ರವಾಸದಲ್ಲಿದ್ದಾಗ, ದಾಕ್ಷಿಣಾತ್ಯ ಜನರಿಂದ ಕೇಳಿದ 'ರಾಮನಾಮ ಸಂಕೀರ್ತನೆ'ಯಿಂದ ನಾನು ಬಹಳ ಆಕರ್ಷಿತನಾಗಿ, ಸಂತೋಷಗೊಂಡೆನು. ಇದು ದೇಶದಲ್ಲೆಲ್ಲ ಪ್ರಚಾರವಾಗಬೇಕೆಂಬ ಸದುದ್ದೇಶದಿಂದ ಇದನ್ನು ಈಗ ಈ ರೂಪದಲ್ಲಿ ಪ್ರಕಟಿಸಲಾಗಿದೆ. ಇದರ ಮೊಟ್ಟಮೊದಲ 'ಸಂಕೀರ್ತನೆ'ಯನ್ನು ಬೇಲೂರು ಮಠದಲ್ಲಿ ಆಯೋಜಿಸಲಾಗಿತ್ತು. ಇಂದು ದೇಶದ ನಾನಾ ಭಾಗಗಳಲ್ಲಿ ಇದನ್ನು ಭಕ್ತಿಪೂರ್ವಕವಾಗಿ, ಉತ್ಸಾಹದಿಂದ ಗಾಯನಮಾಡುತ್ತಿರುವುದು ಬಹಳ ಸಂತೋಷದ ವಿಷಯ. ಆದರೆ ಇದರ ಮೂಲ ಉದ್ದೇಶ ಇನ್ನೂ ಸಂಪೂರ್ಣವಾಗಿ ಫಲಿಸಿಲ್ಲವಾದರೂ, ಭಾಗಶಃ ಅದು ನೆರವೇರಿರುವುದರಲ್ಲಿ ಸಂಶಯವೇ ಇಲ್ಲ. ಈ ಪುಸ್ತಕಕ್ಕೆ ಇರುವ ಅಪಾರ ಬೇಡಿಕೆಯಿಂದ ಅದು ಸಫಲವಾಗುವ ಭರವಸೆ ಇನ್ನೂ ಇದೆ. ಭಕ್ತಿಭಾವದ ಗಾನದಿಂದ ಮನಸ್ಸಿಗೆ ನೆಮ್ಮದಿಯನ್ನೂ, ಶಾಂತಿಯನ್ನೂ ಪಡೆದುಕೊಳ್ಳಲು ಈ ಸಂಕೀರ್ತನೆಯು ಸಹಾಯ ಮಾಡುತ್ತದೆ! ಬ್ರಹ್ಮಚರ್ಯದ ಮೂರ್ತಿಸ್ವರೂಪನಾದ ಮಹಾವೀರ ಆಂಜನೇಯ ಸ್ವಾಮಿಯ ಉಪಾಸನೆ ಹೆಚ್ಚಾಗಬೇಕು ಎನ್ನುವುದು ಪರಮಪೂಜ್ಯ ಸ್ವಾಮಿ ವಿವೇಕಾನಂದರ ಇಚ್ಛೆಯಾಗಿದ್ದಿತು. ಆದ್ದರಿಂದಲೇ ನಾವು ಮಠದಲ್ಲಿ ಈ ನಾಮಸಂಕೀರ್ತನೆಗೆ ಮುಂಚೆ ಹನುಮಂತನ ಆರಾಧನೆಯನ್ನು ನಿಯಮವನ್ನಾಗಿ ಮಾಡಿಕೊಂಡಿದ್ದೇವೆ. ಇತರರೂ ಇದನ್ನು ಅನುಸರಿಸಬೇಕು. ಬ್ರಹ್ಮಚರ್ಯ ಪಾಲನೆಯಿಂದ ಭಗವಂತನ ಪ್ರೀತಿಗೆ ಪಾತ್ರರಾಗಿ, ಈ ದೇಶವನ್ನೂ ಪವಿತ್ರವನ್ನಾಗಿಸಿರಿ ಎನ್ನುವುದೇ ಎಲ್ಲರಿಗೂ ನಮ್ಮ ಹೃದಯಪೂರ್ವಕ ಪ್ರಾರ್ಥನೆಯಾಗಿದೆ."

(ಮುಂದುವರೆಯುವುದು)

## ಒಂದು ಲೋಟ ಹಾಲಿನ ಬೆಲೆ

ಒಬ್ಬ ಬಡ ಹುಡುಗ ಶಾಲೆಗೆ ಹೋಗುತ್ತಿದ್ದ. ದಾರಿಯಲ್ಲಿ ಹೋಗುವಾಗ, ಮನೆಯಿಂದ ಮನೆಗೆ ಸಣ್ಣಪುಟ್ಟ ಸಾಮಾನುಗಳನ್ನು ಮಾರುತ್ತ ಹೋಗುತ್ತಿದ್ದ. ಆಮೂಲಕ ತನ್ನ ಶಾಲೆಗೆ ಹೋಗುವ ಖರ್ಚನ್ನು ಸಂಪಾದಿಸಿಕೊಳ್ಳಲು ಪ್ರಯತ್ನಪಡುತ್ತಿದ್ದ. ಆದರೆ ಅವನ ಹತ್ತಿರ ಆಗ ಉಳಿದಿದ್ದು, ಒಂದೇ ಕಾಸು. ಅಲ್ಲದೆ, ಅವನು ಹಸಿವಿನಿಂದ ಕಂಗಾಲಾಗಿದ್ದ. ಮುಂದಿನ ಮನೆಗೆ ಹೋದಾಗ 'ಊಟ ಕೇಳಬೇಕು' ಎಂದು ತೀರ್ಮಾನಿಸಿದ. ಆದರೆ ಆ ಮನೆಯ ಬಾಗಿಲನ್ನು ತಟ್ಟಿದಾಗ, ಅವನು ಕಂಡಿದ್ದು ಒಬ್ಬ ಬಾಲಕಿಯನ್ನು. ಇದರಿಂದ ಅವನಿಗೆ ನಿರಾಸೆಯಾಯಿತು. ಊಟದ ಬದಲು ಒಂದು ಲೋಟ ನೀರನ್ನು ಕೇಳಿದ. ಅವನಿಗೆ ಹಸಿವಾಗಿರುವುದು ಅವಳಿಗೆ ತಿಳಿದುಬಂತು. ನೀರಿನ ಬದಲು ಒಂದು ಲೋಟ ಹಾಲನ್ನು ತಂದುಕೊಟ್ಟಳು. ಅದನ್ನು ಅವನು ನಿಧಾನವಾಗಿ ಕುಡಿದನು. ಆಮೇಲೆ ಹೀಗೆ ಕೇಳಿದನು: "ನಾನು ಎಷ್ಟು ಹಣ ಕೊಡಬೇಕು?" ಅದಕ್ಕೆ ಆ ಹುಡುಗಿ ಉತ್ತರಿಸಿದಳು: "ನೀನು ನನಗೆ ಏನೂ ಕೊಡಬೇಕಾಗಿಲ್ಲ. ನನ್ನ ತಾಯಿ ನನಗೆ ಕಲಿಸಿದ್ದಾಳೆ, 'ಅನುಕಂಪದಿಂದ ಮಾಡಿದ ಒಳ್ಳೆಯ ಕಾರ್ಯಕ್ಕೆ ಹಣವನ್ನು ತೆಗೆದುಕೊಳ್ಳಬಾರದು' ಎಂದು." ಆ ಹುಡುಗ ಹೇಳಿದ, "ಹಾಗಾದರೆ ನಾನು ನಿನಗೆ ಹೃದಯಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ." ಆ ಹುಡುಗ ಆ ಮನೆ ಬಿಟ್ಟು ಹೊರಬಂದ. ಈಗ ಅವನು ದೈಹಿಕವಾಗಿ ಹೆಚ್ಚು ಶಕ್ತಿಯುತನಾಗಿದ್ದ. ಹಾಗೆಯೇ ತನ್ನ ಸಹಜೀವಿಗಳಲ್ಲಿ ಮತ್ತು ಭಗವಂತನಲ್ಲಿ ಅವನಿಗಿದ್ದ ನಂಬಿಕೆಯೂ ಅಧಿಕವಾಗಿತ್ತು. ಅವನಿಗಿದ್ದ ನಿರಾಶೆ ಮಾಯವಾಗಿತ್ತು. ಯಾವುದೇ ಕಾರಣಕ್ಕೆ, ತನ್ನ ಶಾಲೆಯ ಓದನ್ನು ನಿಲ್ಲಿಸಬಾರದೆಂದು ಅವನು ನಿಶ್ಚಯಿಸಿದ. ಹಲವಾರು ವರ್ಷಗಳು ಕಳೆದವು. ಹುಡುಗಿ ಈಗ ಮಧ್ಯವಯಸ್ಸಿನ ಮಹಿಳೆಯಾಗಿದ್ದಾಳೆ. ಅವಳನ್ನು ಒಂದು ಮಹಾನಗರದ ದೊಡ್ಡ ಆಸ್ಪತ್ರೆಗೆ ಸೇರಿಸಲಾಯಿತು. ಅವಳದ್ದು ಬಹಳ ಅಪರೂಪದ ಕಾಯಿಲೆ. ಅವಳನ್ನು ಗುಣಪಡಿಸಲು ಹಲವಾರು ತಜ್ಞರು ಪ್ರಯತ್ನಿಸುತ್ತಿದ್ದರು. ಕೊನೆಗೆ ಪ್ರಸಿದ್ಧ ವೈದ್ಯರಾದ ಡಾ. ಹೌವಾರ್ಡ್ ಕೆಲ್ಲಿ ಅವರನ್ನು ಈ ಮಹಿಳೆಯ ಪರೀಕ್ಷೆ ಮಾಡುವಂತೆ ವಿನಂತಿಸಿಕೊಳ್ಳಲಾಯಿತು. ಅವರು ಆಕೆಯ ಕೊಠಡಿಗೆ ಹೋದರು. ಆಕೆಯನ್ನು ಹೇಗಾದರೂ ಮಾಡಿ ಗುಣಪಡಿಸುವುದಾಗಿ ಪಣತೊಟ್ಟರು. ಅದಕ್ಕಾಗಿ ಸರ್ವಪ್ರಯತ್ನವನ್ನೂ ಮಾಡಿದರು. ದೀರ್ಘವಾದ ಹೋರಾಟದ ನಂತರ, ಕಾಯಿಲೆಯ ವಿರುದ್ಧದ ಯುದ್ಧವನ್ನು ಗೆದ್ದರು. ಇನ್ನೇನು ಆ ಮಹಿಳೆ ಮನೆಗೆ ಹೋಗಬೇಕು. ಆಸ್ಪತ್ರೆಯ ಖರ್ಚಿನ ಬಿಲ್ ಅನ್ನು ತಮ್ಮ ಅಂತಿಮ ಅನುಮತಿಗಾಗಿ ಕಳಿಸಿಕೊಡುವಂತೆ ಡಾ. ಹೌವಾರ್ಡ್ ಕೆಲ್ಲಿ ಆಸ್ಪತ್ರೆಯ ಕಛೇರಿಯವರಿಗೆ ಕೇಳಿಕೊಂಡರು. ಆ ಬಿಲ್ಲಿನ ಮೇಲೆ ಏನನ್ನೋ ಬರೆದು, ಆ ಮಹಿಳೆಗೆ ಕೊಡುವಂತೆ ನೌಕರನಿಗೆ ಹೇಳಿದರು. ತನ್ನ ಕಾಯಿಲೆ ಸಂಪೂರ್ಣ ಗುಣವಾಗಿದ್ದರಿಂದ ಆ ಮಹಿಳೆಗೆ ಆನಂದವಾಗಿತ್ತು. ಆದರೆ ಬಿಲ್ಲು ಕೈಗೆ ಬಂದಾಗ ಭಯವಾಯಿತು. ಅಷ್ಟು ಹಣವನ್ನು ಕೊಡಲು, ಅವಳು ತನ್ನ ಉಳಿದ ಆಯುಷ್ಯವನ್ನೆಲ್ಲ ದುಡಿಯಬೇಕಾಗಿತ್ತು. ಆದರೆ ಲಕೋಟೆಯನ್ನು ತೆಗೆದುನೋಡಿದಾಗ, ಆಶ್ಚರ್ಯಾನಂದಗಳು ಒಮ್ಮೆಲೇ ಉಂಟಾದವು. ಅದರ ಮೇಲೆ ಡಾಕ್ಟರ್ ತಮ್ಮ ಸಹಿಯೊಡನೆ ಹೀಗೆ ಬರೆದಿದ್ದರು : **"ಒಂದು ಲೋಟ ಹಾಲಿನ ಮೂಲಕ ಇಡೀ ಮೊತ್ತವನ್ನು ಈಗಾಗಲೇ ನೀಡಲಾಗಿದೆ."** ಅವಳಿಗೆ ಎಲ್ಲವೂ ಕ್ಷಣಾರ್ಧದಲ್ಲಿ ಅರ್ಥವಾಯಿತು. ಅವಳ ಕಣ್ಣಿನಿಂದ ಆನಂದಾಶ್ರುಗಳು ಸುರಿದವು. ಅವಳ ಸಂತೋಷಭರಿತ ಹೃದಯ ಮೌನವಾಗಿ ಹೀಗೆ ಪ್ರಾರ್ಥಿಸಿತು: 'ಭಗವಂತನೇ, ನಿನಗೆ ಧನ್ಯವಾದಗಳು. ನಿನ್ನ ಪ್ರೇಮವೆಂಬುದು ಮಾನವಹೃದಯಗಳ ಮೂಲಕ, ಅವರ ಉದಾರಕಾರ್ಯಗಳ ಮೂಲಕ ಹೀಗೆ ಇನ್ನೂ ಹರಿದುಬರುತ್ತಿದೆ." (ಆಧಾರ)